# ಜನಸಾಮಾನ್ಯರ ಜಗವರಿಯಲು ಸೈಕಲ್ ಯಾನ

ಮಹಾನ್ ವ್ಯಕ್ತಿಗಳ ಜನ್ಮಸ್ಥಳವನ್ನು ಸೈಕಲ್ ಮೂಲಕ ತಲುಪುವ ಇರಾದೆ ಶಿವರಾಯಪ್ಪ, ನವೀನ ಕುಮಾರ್ ಅವರದು. ಸಾಮಾನ್ಯ ಜನರ ಬದುಕನ್ನು ಹತ್ತಿರದಿಂದ ನೋಡಲು ಸೈಕಲ್ ಯಾನಕ್ಕಿಂತ ಬೇರೊಂದು ಉತ್ತಮ ದಾರಿಯಿಲ್ಲ ಎಂಬುದು ಅವರ ಅಭಿಮತ.

**ಮತ್ತೆ ಸೈಕಲ್ ಯಾನ ಮಾಡಲಿದ್ದೀರಾ?**

‘ಖಂಡಿತ’ ಎಂದು ತಕ್ಷಣವೇ ಹೇಳಿದರು ಶಿವರಾಯ, ನವೀನ್. ‘ಸೈಕಲ್ ಯಾನದಲ್ಲಿ ಸಾಮಾನ್ಯ ಜನರ ಬದುಕನ್ನು ಅತ್ಯಂತ ಹತ್ತಿರದಿಂದ ನೋಡಲು ಸಾಧ್ಯ. ವಿವಿಧ ಪ್ರದೇಶಗಳ ಜನರಲ್ಲಿರುವ ಪ್ರೀತಿ, ವಾತ್ಸಲ್ಯ, ಕಾಳಜಿಯನ್ನು ಅನುಭವಿಸಲು ಸೈಕಲ್ ಯಾನಕ್ಕಿಂತ ಬೇರೆ ದಾರಿ ಯಾವುದಿದೆ’ ಎಂದು ಅವರು ಮರುಪ್ರಶ್ನಿಸಿದರು.



ನವೀನ ಕುಮಾರ್ ಹಾಗೂ ಶಿವರಾಯಪ್ಪ ನೀರಲೋಟಿ

■ ಆನಂದತೀರ್ಥ ಪ್ಯಾಟಿ

ಕೊಪ್ಪಳದ ಬಿರುಬಿಸಿಲಿನಲ್ಲಿ ಸೈಕಲ್ ಮೇಲೆ ಕೂತು, ಪೆಡಲ್ ಮೇಲೆ ಕಾಲಿಟ್ಟಾಗ ಶಿವರಾಯ ಅವರಲ್ಲಿ ಇದ್ದುದು ಗುರಿ ಮುಟ್ಟುವ ಛಲವೊಂದೇ. ಅದೂ ಹವಾಮಾನ ವೈಪರೀತ್ಯ, ಕಾಡು, ಘಟ್ಟದ ದಾರಿಗಳು, ಊಟ ವಸತಿ ಸಮಸ್ಯೆ, ಮೈನಡುಗಿಸುವಂಥ ಚಳಿ. ಇದೆಲ್ಲವನ್ನೂ ಮೀರಿ, ಎರಡೂವರೆ ಸಾವಿರ ಕಿಲೋಮೀಟರ್ ದೂರದಲ್ಲಿ ಕೈಬೀಸಿ ಕರೆಯುತ್ತಿದ್ದ ಬಂಗಾ ಊರು. ‘ಇದೇನೂ ಹೊಸದಲ್ಲ. ಸೈಕಲ್ ಮೇಲೆ ಭಾರತದ ಎಡಕ್ಕೆ ಹಾಗೂ ಬಲಕ್ಕೆ ಹೋಗಿಬಂದಿದ್ದೆ. ಈ ಸಲ ಪಂಜಾಬ್ ಕರೆಯಿತು. ಸ್ನೇಹಿತ ನವೀನ್ ಜತೆಗೂಡಿದ. ಅಷ್ಟೇ’ ಎನ್ನುತ್ತ ಕೈಬೀಸಿ ಮುಂದೆ ಸಾಗಿದ್ದರು ಶಿವರಾಯ. ಅವತ್ತು ಡಿಸೆಂಬರ್ 25, 2025.

ಹೊಸ ವರ್ಷದ ಎರಡನೇ ವಾರದಲ್ಲಿ (ಜನವರಿ 9, 2026) ಅವರು ಪಂಜಾಬಿನ ಬಂಗಾ ಪಟ್ಟಣದಲ್ಲಿ ಇದ್ದರು. ಕ್ರಾಂತಿಕಾರಿ, ಸ್ವಾತಂತ್ರ್ಯಯೋಧ ಭಗತ್ ಸಿಂಗ್ ಕುಟುಂಬದ ಮನೆಯ ಎದುರು ನಿಂತವರ ಮೊಗದಲ್ಲಿ ಹೆಮ್ಮೆ ಹಾಗೂ ಖುಷಿ ಕಾಣುತ್ತಿತ್ತು.

ಕೊಪ್ಪಳ ಜಿಲ್ಲೆ ಬೆಟಗೇರಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನೌಕರರಾಗಿರುವ ಶಿವರಾಯಪ್ಪ ನೀರಲೋಟಿ ಅವರದು ಈಗ ಹ್ಯಾಟ್ರಿಕ್ ಸಂಭ್ರಮ, ತಾಸೊಪ್ಪತ್ತಿನಲ್ಲಿ ಸಾವಿರ ಕಿಲೋಮೀಟರ್ ದೂರ ಕ್ರಮಿಸಬಹುದಾದ ದಾರಿಯನ್ನು ಅವರು ಸೈಕಲ್ ತುಳಿಯುತ್ತ ತಲುಪುತ್ತಾರೆ. ಆ ಅನುಭವವೇ ವಿಶಿಷ್ಟ. ನಿತ್ಯವೂ ಹೊಸ ದಾರಿ, ಹೊಸತನ; ಹೊಸ ಅನುಭವ.

## ಸೈಕಲ್ ಒಡನಾಟ

ಬಾಲ್ಯದಿಂದಲೂ ಸೈಕಲ್ ಒಡನಾಟ ಶಿವರಾಯ ಅವರಿಗಿತ್ತು. ಏಳನೇ ವಯಸ್ಸಿನಲ್ಲಿ ಸೈಕಲ್ ಕಲಿತಿದ್ದರು. ಬಹುತೇಕ ಜನರು ವರ್ಷಗಳು ಉರುಳಿದಂತೆ ಸೈಕಲ್ಲಿನಿಂದ ಬೈಕ್, ಕಾರ್ ಸವಾರಿ ಬಯಸುತ್ತಾರೆ. ಉದ್ಯೋಗ ಸಿಕ್ಕರಂತೂ ವಾಹನಗಳದ್ದೇ ಕಾರುಬಾರು! ಶಿವರಾಯ ಅವರಿಗೆ ಈಗಲೂ ಸೈಕಲ್ ಮೇಲೆಯೇ ಹೆಚ್ಚು ವ್ಯಾಮೋಹ. ಏಕಕಾಲಕ್ಕೆ ಶರೀರಕ್ಕೂ ಪರಿಸರಕ್ಕೂ ಸೈಕಲ್ ಕೊಡುವಷ್ಟು ಕೊಡುಗೆ ಬೇರಾವುದೂ ಕೊಡದು ಎಂಬುದು ಅವರ ಪ್ರತಿಪಾದನೆ.